<u>ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾದಃ ನ್ಯಾಯಾಲಯಃ ನ.ರಾ.ಪುರ</u>

**ಸಿ.ಸಿ ಃ 521/2024**

ಸಾಕ್ಷಿದಾರರ ಹೆಸರು ಃ ಶೇಖರ್ ಎಂ ಆರ್

ತಂದೆಯ ಹೆಸರು ಃ ಎಂ ವಿ ರಾಜು

ವಯಸ್ಸು ಃ 56 ವರ್ಷ

ಉದ್ಯೋಗ ಃ ಅಬಕಾರಿ ನಿರೀಕ್ಷಕರು,

ವಾಸಸ್ಥಳ ಃ ನ ರಾ ಪುರ

ಸಿ.ಡಬ್ಲ್ಯೂ-7

ಪಿ.ಡಬ್ಲ್ಯೂ-2

ದಿನಾಂಕಃ **25.03.2025** ರಂದು ಪ್ರಮಾಣವಚನ ಬೋಧಿಸಲಾಯಿತು.

<u>ಃಃ ಮುಖ್ಯ ವಿಚಾರಣೆ ಃ ಮಾನ್ಯ ಃ ಎಪಿಪಿಯವರಿಂದ ಃಃ</u>

ನಾನು 2023 ರಿಂದ ಈವರೆಗೆ ನ.ರಾ.ಪುರ ವಲಯದಲ್ಲಿ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ನಾನು ಚಾಸಾ-6 ರವರಿಂದ ಕಡತವನ್ನು ಪಡೆದುಕೊಂಡು ತನಿಖೆ ಮುಂದುವರೆಸಿ ದಿನಾಂಕಃ 11.07.2024 ರಂದು ರಾಸಾಯನಿಕ ಪರೀಕ್ಷಾ ವರದಿ ಪಡೆದಿರುತ್ತೇನೆ. ಸಾಕ್ಷಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಈ ಸಂಬಂಧ ನಾನು ಚಾಸಾ-4 ರವರ ಹೇಳಿಕೆ ಪಡೆದಿರುತ್ತೇನೆ. ನಂತರ ಪ್ರಕರಣದ ಎಲ್ಲಾ ದಾಖಲೆಗಳಿಂದ ಆರೋಪಿ ವಿರುದ್ಧ ಆರೋಪ ಸಾಬೀತಾಗಿದ್ದರಿಂದ ನ್ಯಾಯಾಲಯಕ್ಕೆ ದೋಷಾರೋಪಣ ಪತ್ರ ಸಲ್ಲಿಸಿರುತ್ತೇನೆ.

<u>ಪಾಟೀ ಸವಾಲು ಆರೋಪಿ ಪರ ಶ್ರೀ.ಜಿ ಡಿ ವಕೀಲರಿಂದ ಃ</u>

ನಾನು ಚಾಸಾ-4 ರವರ ಹೇಳಿಕೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ತನಿಖಾ ಕಾಲದಲ್ಲಿ ಕೃತ್ಯ ಸ್ಥಳಕ್ಕೆ ಭೇಟಿ ನೀಡಿರುತ್ತೇನೆ. ಸದರಿ ಸಮಯದಲ್ಲಿ ಮಹಜರ್ ಮಾಡಿರುವುದಿಲ್ಲ. ಆರೋಪಿ ಯಾವುದೇ ತಪ್ಪು ಮಾಡದಿದ್ದರೂ ನಾನು ಸುಳ್ಳು ದೋಷಾರೋಪಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಃಮರುವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಪ್ರ.ದ.ನ್ಯಾದಂಃ ನ.ರಾ.ಪುರ.

ಸಾಕ್ಷಿ ಸಹಿಃ